ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು)

ಅ) ಸಾರಾಯಿ ಮಾರಾಟದ ನಿಷೇಧವನ್ನು ದಿನಾಂಕ 01–07–2007 ರಿಂದ ಜಾರಿಗೆ ತರಲಾಗುವುದು

ಹಿಂದಿನ ಆರ್ಥಿಕ ವರ್ಷ, ಅಂದರೆ 2005–06 ನೇ ಸಾಲಿನಲ್ಲಿ ಸಾರಾಯಿ ಮಾರಾಟದಿಂದ ಸರ್ಕಾರಕ್ಕೆ ರೂ 1565 43 ಕೋಟಿಗಳಷ್ಟು ವರಮಾನ ಬಂದಿದೆ

ಆ) ಇಲ್ಲ

1371 (2032) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಅರ್ಜಿದಾರ ರೈತರಿಗೆ ಅವರ ಹಕ್ಕುಗಳನ್ನು ಊರ್ಜಿತಗೊಳಿಸುವ ಅಧಿಕಾರೇತರ ಸಮಿತಿಗಳನ್ನು ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ರಚಿಸಲಾಗಿದೆ,

ಆ) ಈ ಕಾರ್ಯಾಚರಣೆಯನ್ನು ರಾಜ್ಯದಾದ್ಯಂತ ಎಷ್ಟು ವರ್ಷಗಳಲಿ ಪೂರೈಸಬೇಕೆಂದು ಸರ್ಕಾರ ಯೋಚಿಸಿದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಈಗಾಗಲೇ 119 ತಾಲ್ಲೂಕುಗಳಿಗೆ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ

ಆ) ಈ ಕಾರ್ಯಚರಣೆ ಪೂರೈಸಲು ದಿನಾಂಕ 26–04–2008 ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ

1372 (2033) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀನಿವಾಸಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅರಣ್ಯ ಭೂಮಿ ಅತಿಕ್ರಮಣ ಆಗಿರುವ ಪ್ರಕರಣಗಳು ಎಷ್ಟು,